# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
## (ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ,
ನಂ.29, ವಿಜಯನಗರ 2ನೇ ಹಂತ
ಹಿನಕಲ್, ಮೈಸೂರು-17
CIN:U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ಉಪ ವಿಭಾಗ,ಬನ್ನೂರು
ದೂರವಾಣಿ ಸಂಖ್ಯೆ : 08227 275506/07
E-Mail ID : cescbannur@gmail.com

ದಿನಾಂಕ 12.06.2019 ರಂದು ಬೆಳಗ್ಗೆ 11.00 ಗಂಟೆಗೆ **ಕಾರ್ಯನಿರ್ವಾಹಕ ಇಂಜಿನಿಯರ್** (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಬನ್ನೂರು ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

| | |
|---|---|
| ಶ್ರೀ ರಮೇಶ್ ಹೆಚ್ ಕೆ. | ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ನಂಜನಗೂಡು. |
| ಶ್ರೀ ಹರೀಶ್ ಜಿ | ಸ.ಕಾ.ಇಂ (ವಿ) (ಪ್ರಭಾರ), ಸ.ಇಂ (ವಿ) ಬನ್ನೂರು ಪಟ್ಟಣ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀಮತಿ ನಾಗವೇಣಿ ಎಂ | ಸ.ಇಂ (ವಿ) ತಾಂತ್ರಿಕ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಶ್ವನಾಥ್ ಎಸ್. ಎಲ್. | ಸ.ಇಂ (ವಿ) ಚಾಮನಹಳ್ಳಿ ಶಾಖೆ (ಪ್ರಭಾರ), ತುಂಬಲ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಶ್ರೀನಿವಾಸ್ ಟಿ. ವಿ. | ಸ.ಇಂ (ವಿ) ಕೇತುಪುರ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಯೋಗೇಶ್ | ಕಿ.ಇಂ (ವಿ) ಮಾದಿಗಹಳ್ಳಿ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)(ಪ್ರಭಾರ), ಆದ ಶ್ರೀ ಹರೀಶ್ ಜಿ. ರವರು ಹಾಜರಿದ್ದ ಅಧಿಕಾರಿ / ನೌಕರರುಗಳನ್ನು, ರೈತ ಮುಖಂಡರು, ರೈತರು ಹಾಗೂ ವಿದ್ಯುತ್ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ದಿನಾಂಕ : 31.01.2019 ನಡೆದ ಜನ ಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ದೂರುಗಳ ಬಗ್ಗೆ ಮಾನ್ಯ **ಕಾರ್ಯನಿರ್ವಾಹಕ ಇಂಜಿನಿಯರ್ (ವಿ).** ರವರು ಕೂಲಂಕುಷವಾಗಿ ಪರಿಶೀಲಿಸಿ, 10 ದೂರುಗಳಲ್ಲಿ 06 ದೂರುಗಳನ್ನು ಸರಿಪಡಿಸಲಾಗಿದ್ದು ಮತ್ತು 04 ದೂರುಗಳನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಯವರಿಗೆ ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ ರೈತಮುಖಂಡರು, ರೈತರು, ಗ್ರಾಹಕರು ಮತ್ತು ಸಾರ್ವಜನಿಕರಿಂದ ಮೌಖಿಕವಾಗಿ/ಲಿಖಿತವಾಗಿ ದೂರುಗಳನ್ನು ಸ್ವೀಕರಿಸಲಾಯಿತು.

ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ರಾಜುಗೌಡ, ಸೀಹಳ್ಳಿ 9731867015 | ಅರವಟ್ಟಿಗೆಕೊಪ್ಪಲು ಗ್ರಾಮದ ಬಳಿ ಹೆಚ್.ಟಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಬೇಕೆಂದು ದೂರಿದರು.<br>ಚಿ.ಸೀಹಳ್ಳಿ ಗ್ರಾಮದಲ್ಲಿ ಭುಗತಗಹಳ್ಳಿ ಹುಚ್ಚಮ್ಮತಾಯಿ ದೇವಸ್ಥಾನದ ಹತ್ತಿರ ಕಂಬಗಳನ್ನು ಅಳವಡಿಸಲು ಕೋರಿದರು.<br>ಚಿ.ಸೀಹಳ್ಳಿ ಗ್ರಾಮದಲ್ಲಿ ಬೀದಿ ದೀಪಗಳು ಹಗಲಿನಲ್ಲಿ ಉರಿಯುವುದರ ಬಗ್ಗೆ ನಿರ್ವಹಣೆ ಮಾಡಲು ದೂರಿದರು.<br>ಶಾಖಾವಾರು ಫೋನ್ ಸ್ಥಾಪನೆ ಕೋರಿ.<br>ದೂರಿನ ಪ್ರತಿಯನ್ನು ಗ್ರಾಹಕರಿಗೆ ಅಂಚೆ ಮುಖಾಂತರ ತಲುಪಿಸಬೇಕೆಂದು ಕೋರಿದರು | ಮಾಡಿಗಹಳ್ಳಿ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದರು.<br>ಸ.ಕಾ.ನಿ. ಇಂ ರವರಿಗೆ ಬೀದಿ ದೀಪಗಳ ನಿರ್ವಹಣೆ ಬಗ್ಗೆ ಪಿಡಿಓ ಗಳಿಗೆ ಪತ್ರ ಬರೆದು ಹಗಲಿನಲ್ಲಿ ಬೀದಿ ದೀಪಗಳು ಉರಿಯುವುದನ್ನು ತಪ್ಪಿಸಬೇಕೆಂದು ತಿಳಿಸಿದರು |
| 2. | ಶ್ರೀ ನಾರಾಯಣ, ರೈತ ಸಂಘ ಮುಖಂಡರು, 9448055920 | ಒಡ್ಡಲ್ ರಂಗನಾಥಸ್ವಾಮಿ ಬೆಟ್ಟದ ಮೇಲೆ ಇರುವ ಕಲ್ಲಿನ ಕಂಬಗಳನ್ನು ಬದಲಾಯಿಸಲು ಕೋರಿ.<br>ಬನ್ನೂರು ಪೋಲೀಸ್ ಸ್ಟೇಷನ್ ಬಳಿ ಕಂಬದಲ್ಲಿ ಜೋತು ಬಿದ್ದಿರುವ ಸರ್ವೀಸ್ ಮೇನ್ ಸರಿಪಡಿಸಲು ಕೋರಿ.<br>ಚಂದಳ್ಳಿ ಐ.ಪಿ ಫೀಡರ್‌ಗೆ ಬೆಳಗ್ಗೆ 4ರಿಂದ 11ರ ಬದಲು, 11 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಮಾಡಲು ಕೋರಿದರು. | ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 3. | ಶ್ರೀ ಚಿನ್ನಸ್ವಾಮಿ, ಯಾಚೇನಹಳ್ಳಿ 8095671883 | ತುರುಗನೂರು ಮೇಕೆ ಫಾರಂಗೆ ಅನಧಿಕೃತವಾಗಿ ವಿದ್ಯುತ್ ನೀಡಿರುವುದು<br>ಅಂಕನಹಳ್ಳಿ ದರ್ಗಾದ ಬಳಿ ಹಳೆಯ ಕಂಬಗಳನ್ನು ಹಾಕಿರುವ ಬಗ್ಗೆ | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದರು. |

| | | | |
|---|---|---|---|
| 4. | ಶ್ರೀ ಹೇಮಂತ್ ಕುಮಾರ್, ಯಾಚೇನಹಳ್ಳಿ | ಇವರು ಸುಟ್ಟು ಹೋಗಿರುವ 100ಕೆವಿಎ ಪರಿವರ್ತಕವನ್ನು 20ರಿಂದ 25 ದಿನಗಳಾದರು ಬದಲಾಯಿಸಿರಲಿಲ್ಲವೆಂದು ದೂರಿದರು. | ಮಾನ್ಯ ಕಾ.ನಿ.ಇಂ ರವರು 3 ತಿಂಗಳಲ್ಲಿ 3 ಬಾರಿ ಸುಟ್ಟುಹೋದರೆ ತತ್ಕ್ಷಣದಲ್ಲಿ ಬದಲಾಯಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. |
| 5. | ಶ್ರೀ ರಾಜು, ಅತ್ತಹಳ್ಳಿ 8722399791 | ಒಡ್ಡಲ್ ರಂಗನಾಥಸ್ವಾಮಿ ಬೆಟ್ಟದ ಸುಟ್ಟು ಹೋಗಿರುವ ಪರಿವರ್ತಕವನ್ನು ಬದಲಾಯಿಸಲು ಕೋರಿ.<br>11ಕೆವಿ ಕೇತುಪುರ ನಿರಂತರ ಜ್ಯೋತಿ ಫೀಡರ್ ವಿದ್ಯುತ್ ಸರಬರಾಜು ಸರಿಯಾಗಿ ಮಾಡುತ್ತಿಲ್ಲವೆಂದು ದೂರಿದರು<br>ಸಂತೆಮಾಳ ಪರಿವರ್ತಕದ ಕಂಬಗಳಿಗೆ ಸೀಮೆಂಟ್ ಹಾಕುವ ಬಗ್ಗೆ | ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.<br>ಮಾರ್ಗ ನಿರ್ವಹಣೆ ಮಾಡಲು ಶಾಖಾಧಿಕಾರಿಗಳಿಗೆ ತಿಳಿಸಿದರು<br>ಬನ್ನೂರು ಪಟ್ಟಣ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಲು ಸೂಚಿಸಿದರು. |
| 6. | ಶ್ರೀ ಶಾಂತರಾಜು ಸೇನಾಪತಿಹಳ್ಳಿ, 7411150100 | ಸೇನಾಪತಿಹಳ್ಳಿ ರಸ್ತೆಯ ಎರಡು ಬದಿಯಲ್ಲೂ ಕಂಬಗಳಿರುವುದರಿಂದ ತಿರುಗಾಡಲು ತೊಂದರೆಯಾಗುತ್ತಿದೆ ಕಂಬಗಳನ್ನು ಒಂದು ಬದಿಗೆ ಸ್ಥಳಾಂತರಿಸಬೇಕೆಂದು ಕೋರಿದರು. | ಕೇತುಪುರ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಲು ಸೂಚಿಸಿದರು. |
| 7. | ಶ್ರೀ ಪುಟ್ಟರಾಜು, ಅತ್ತಹಳ್ಳಿ | ಚಾಮನಹಳ್ಳಿ ಶಾಖಾಧಿಕಾರಿಗಳು ನೋಂದಣಿ ಮಾಡಿರುವ ಅರ್ಜಿಗೆ ಅಂದಾಜು ಪಟ್ಟಿಯನ್ನು ತಯಾರಿಸುತ್ತಿಲ್ಲವೆಂದು ದೂರಿದರು. | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು. |
| 8. | ಶ್ರೀ ಲೋಕೇಶ್, ಅತ್ತಹಳ್ಳಿ | 11ಕೆವಿ ಕೇತುಪುರ ನಿರಂತರ ಜ್ಯೋತಿ ಫೀಡರ್ ವಿದ್ಯುತ್ ಸರಬರಾಜು ಸರಿಯಾಗಿ ಮಾಡುತ್ತಿಲ್ಲವೆಂದು ದೂರಿದರು<br>ಅತ್ತಹಳ್ಳಿ ಗ್ರಾಮದ ಜಯಮ್ಮ ಪರಿವರ್ತಕವನ್ನು 63ಕೆವಿಎ ಯಿಂದ 100ಕೆವಿಎ ಗೆ ಬದಲಾಯಿಸಬೇಕೆಂದು ಕೋರಿದರು. | ಮಾರ್ಗ ನಿರ್ವಹಣೆ ಮಾಡಲು ಶಾಖಾಧಿಕಾರಿಗಳಿಗೆ ತಿಳಿಸಿದರು<br>ಕೇತುಪುರ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಿದರು. |
| 9. | ಶ್ರೀ ನಿಂಗಣ್ಣ ಅತ್ತಹಳ್ಳಿ, 9731871375 | ಇವರ ಹಲ್ಲರ್ ಫ್ಲೋರ್ ಮಿಲ್‌ನ ವಿದ್ಯುತ್ ಬಿಲ್ಲು ಈ ತಿಂಗಳನಲ್ಲಿ 12000/- ಬಂದಿದೆ ಎಂದು ದೂರಿದರು. | ಮಾನ್ಯ ಕಾ.ನಿ.ಇಂ ರವರು ವಿದ್ಯುತ್ ಬಿಲ್ ಪರೀಕ್ಷಿಸಲಾಗಿ ಬಿಲ್ ಸರಿಯಾಗಿದ್ದು ಹಿಂದೆ ಜಿವಿಪಿ ಬಿಲ್ ನೀಡುವಾಗ ಕೊನೆಯ ಒಂದು ಅಂಕಿಯನ್ನು ಬಿಟ್ಟು ಬಿಲ್ ನೀಡುತ್ತಿದ್ದರಿಂದ ಈ ಬಾರಿ ಸರಿಯಾಗಿ ರೀಡಿಂಗ್ ಹಾಕಿರುವುದರಿಂದ 12000/- ಬಂದಿದೆ ಎಂದು ತಿಳಿಸಿದರು. |

| | | | |
|---|---|---|---|
| 10. | ಶ್ರೀ ಜಗದೀಶ್, ಹನುಮನಾಳು, 9008231695 | ಹನುಮನಾಳು ಊರಿನ ಪರಿವರ್ತಕವನ್ನು ಸ್ಥಳಾಂತರಿಸಬೇಕೆಂದು ಕೋರಿದರು. | ಮಾದಿಗಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. |
| 11. | ಶ್ರೀ ರಾಮ್ ಪ್ರಸಾದ್, ಅತ್ತಹಳ್ಳಿ, 9880932689 | ಚಾಮನಹಳ್ಳಿ ಗುಡ್ಡದ ಕೋಳಿಫಾರಂ ಹತ್ತಿರ ಎಲ್.ಟಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಬೇಕೆಂದು ಕೋರಿದರು. | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಿದರು. |
| 12. | ಶ್ರೀ ಹೊಂಬೇಗೌಡ, ಬಾಣಗವಾಡಿ, 9620072851 | ಬಾಣಗವಾಡಿಯ ಹೆಚ್ಚುವರಿ 25ಕೆವಿಎ ಪರಿವರ್ತಕ ಹಾಕಿಲ್ಲವೆಂದು ದೂರಿದರು. | ಮಾದಿಗಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಲು ಸೂಚಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಬನ್ನೂರು

ಕ್ರಮ ಸಂಖ್ಯೆ : ಸ.ಕಾ.ನಿ (ವಿ)/ಹಿಸ/ಬ/2019-20/437-45

ದಿನಾಂಕ : 13.06.2019

ಪ್ರತಿಗಳು.

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ನಂಜನಗೂಡು, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು/ ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.